ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಸೋಮವಾರ, ದಿನಾಂಕ: 14ನೇ ಡಿಸೆಂಬರ್, 2020

ಸಹ ಶಿಕ್ಷಕರಿಗೆ/ಉಪನ್ಯಾಸಕರಿಗೆ ನೀಡಲಾಗಿದ್ದ ವೇತನ ಬಡ್ತಿ ಹಿಂಪಡೆದಿರುವ ಬಗ್ಗೆ

ಡಾ|| ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-

558(715) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶ್ರೀ ಜಿ.ಕುಮಾರ್ ನಾಯಕ್ ವರದಿಯನ್ವಯ ಸಹಶಿಕ್ಷಕರಿಗೆ ಮತ್ತು ಉಪನ್ಯಾಸಕರಿಗೆ ನೀಡಲಾಗಿದ್ದ ಒಂದು ವೇತನ ಬಡ್ತಿಯನ್ನು ಸರ್ಕಾರವು ಹಿಂಪಡೆಯಲು ಸುತ್ತೋಲೆ ಹೊರಡಿಸಿರುವುದು ನಿಜವೇ;

(ಆ) ನಿಜವಾಗಿದ್ದಲ್ಲಿ, ಈ ಸುತ್ತೋಲೆಯನ್ನು ಹೊರಡಿಸಲು ಕಾರಣಗಳೇನು?